# ‘ಗುರಿ’ ಮುಟ್ಟುವ ಮಾತೇ ಚೋದ್ಯ!

ಹಿಂದೂ ಧರ್ಮದ ಮಹತ್ವದ ಕೃತಿಯಾದ ಭಗವದ್ಗೀತೆಯಲ್ಲಿ ಕೃಷ್ಣ ಹೇಳಿದ ಒಂದು ಮಾತು ಇದು.

‘ಯೇ ಯಥಾ ಮಾಂ ಪ್ರಪದ್ಯನ್ತೇ! ತಾನ್ ತಥೈವ ಭಜಾಮ್ಯಹಂ!!
ಮಮ ವರ್ತ್ಮಾನುವರ್ತಂತೇ! ಮನುಷ್ಯಾಃ ಪಾರ್ಥ ಸರ್ವಶಃ!!

‘ಯಾರು ಹೇಗೆ ನನ್ನನ್ನು ಸೇವಿಸುತ್ತಾರೆ. ಅವರನ್ನು ಹಾಗೆಯೇ ನಾನು ಅನುಗ್ರಹಿಸುತ್ತೇನೆ. ಮನುಷ್ಯರು ಯಾವ ದಾರಿಯಲ್ಲಿ ಸಾಗಿದರೂ, ಏಪಾರ್ಥ; ಕಡೆಗೆ ನನ್ನೆಡೆಗೆಯೇ ಬರುತ್ತಾರೆ’

ಇದು ಬಹಳ ಆಳವಾದ ಮಾತು. ಈ ಮಾತನ್ನು ಧ್ಯಾನಿಸಬೇಕಿದೆ. ಕೃಷ್ಣನ ಈ ಮಾತು ಅರ್ಥವಾದರೆ ಹಿಂದೂ ಧರ್ಮವೆಂದು ನಾವು ಕರೆಯುವ ಆಧ್ಯಾತ್ಮಿಕ ಪ್ರಣಾಲಿಯೊಂದರ ಒಳಹೊರಗಿನ ಚಹರೆಗಳು ತಿಳಿದುಬಂದಾವು.

ಬದುಕಿಗೆ ಎರಡು ದಡ ಇದೆ ಎಂದು ಬಗೆದೆವಾದರೆ ನಾವು ಕಾಣದ ಆಚೆಯ ದಡದಿಂದ ಹೇಳಲ್ಪಟ್ಟ ಮಾತು ಇದು. ಅಲ್ಲಿಂದ ಹೇಳಿದ ಮಾತನ್ನು ನಾವು ಕೇಳಿಸಿಕೊಳ್ಳಬಲ್ಲೆವು ಎಂದು ಕೃಷ್ಣನ ವಿಶ್ವಾಸ. ಇಲ್ಲಿನ ಮಾತುಗಳನ್ನು; ಈ ಲೋಕದ ಮಾತುಗಳನ್ನು ಬಹಳ ಕೇಳಿದ್ದೇವೆ. ಕೇಳುತ್ತಲೇ ಇದ್ದೇವೆ. ಈ ಮಾತುಗಳಲ್ಲಿ ನಾವು ಕಳೆದುಹೋಗುವ ಸಂಭವವೇ ಹೆಚ್ಚು. ಹಾಗೆ ಕಳೆದು ಹೋಗದಂತೆ ಅಥವಾ ಕಳೆದು ಹೋಗುತ್ತಿರುವುದು ನಮಗೇ ಗೊತ್ತಾಗುವಂತೆ, ಇನ್ನೊಂದು ರೀತಿಯಲ್ಲಿ ನಮ್ಮನ್ನು ಯೋಚನೆ ಮಾಡುವಂತೆ ಉತ್ತೇಜಿಸುವ ಮಾತು ಇದು ಕೃಷ್ಣನ ಈ ಮಾತು. ‘ಎನ್ನ ಕಿವುಡನ ಮಾಡು’ ಎಂದು ಬಸವಣ್ಣ ಹೇಳಿದ್ದು ಲೋಕದ ಸ್ತುತಿ ನಿಂದೆಗಳಲ್ಲೆ ಸುಳಿಯುವ ಸುಳಿಯುವ ಲೌಕಿಕದ ಮಾತುಗಳು ಕಿವಿಗಳಿಗೆ ಬೀಳದಿರಲಿ ಎಂದು. ಹೊಸ ಮಾತುಗಳನ್ನು ಕೇಳಿಸು ಎಂದು ಕೂಡ ಇದರ ಇಂಗಿತ. ಇದುವರೆಗೆ ನೀವು ಕೇಳಿರದ ಮಾತಿನಲ್ಲಿಯೆ ‘ಬೆಳಕು’ ಇರುವುದು ಎಂದು ಬುದ್ಧ ಕೂಡ ಹೇಳಿದ್ದುಂಟು.

ಕೃಷ್ಣ ತನ್ನನ್ನು ಕುರಿತು ಹೇಳುತ್ತಿದ್ದಾನೆ. ತನ್ನನ್ನು ತೆರೆದುಕೊಳ್ಳುತ್ತಿದ್ದಾನೆ. ಅಂದರೆ ಅವನೇ ಅವನ ವಿಷಯವನ್ನು ಹೇಳಬೇಕಷ್ಟೆ. ಅವನ ಸತ್ಯವನ್ನು ಅವನೇ ತೆರೆದು ತೋರಿಸಬೇಕಷ್ಟೆ. ಬೇರೆ ಯಾರೂ ಆ ಸತ್ಯವನ್ನು ಭೇದಿಸಲಾರರು. ನಾವು ‘ಸತ್ಯ’ವನ್ನು ಭೇದಿಸಲಾರೆವು ಎನ್ನುವ ವಿನಮ್ರ ತಿಳುವಳಿಕೆಯೇ ಅದು ತನ್ನನ್ನು ತೆರೆದು ತೋರಿಸುವುದಕ್ಕೆ ಮಾಡಿದ ಪ್ರಾರ್ಥನೆಯಾಗಿ ಪರಿಣಮಿಸಬಹುದು. ಅದು ಆಡುವ ಮಾತನ್ನು ಕೇಳಿಸಿಕೊಳ್ಳುವುದಕ್ಕೆ ಬೇಕಾದ ಕಿವಿಯ ಸೂಕ್ಷ್ಮತೆಯನ್ನು ಪಡೆಯುವುದೆಂದರೆ ನಾವು ಎಲ್ಲವನ್ನೂ ಕೇಳಿಸಿಕೊಳ್ಳಬಲ್ಲೆವು ಎಂಬ ದರ್ಪದ ಭಾವವಲ್ಲ, ಕೇಳಿಸಿಕೊಳ್ಳ ಇಂದ್ರಿಯದ ಮೇಲೆ ಇರುವ ವ್ಯಾಮೋಹವಲ್ಲ, ಲೋಕದ ಮಾತು ಕೇಳಿದ್ದು ಸಾಕು ಎಂಬ ರೀತಿಯ, ಎನ್ನಕಿವುಡನ ಮಾಡು ಎಂಬ ರೀತಿಯ ಇಂದ್ರಿಯದಮನ. ಒಂದು ಬದಿಯಲ್ಲಿ ನಡೆಯುವ ಇಂದ್ರಿಯದಮನವು ಇನ್ನೊಂದು ಬದಿಯಲ್ಲಿ ಇದುವರೆಗೆ ಕೇಳದ ಮಾತುಗಳನ್ನು ಕೇಳಿಸಿಕೊಳ್ಳಬಲ್ಲ ಇಂದ್ರಿಯ ಸೂಕ್ಷ್ಮತೆಯಾಗಿ ಮಾರ್ಪಡುವುದು. ಈ ಮಾರ್ಪಾಡು, ಲೋಕಜೀವನದ ಅನುಭವದ ಮೇಲಿನಿಂದ ಸಹಜವಾಗಿ ಯಾವುದೇ ಬಲಾತ್ಕಾರವಿಲ್ಲದೆ ಸಂಭವಿಸುವಂತೆ ಏರ್ಪಡಿಸಿ, ಅದಕ್ಕಾಗಿ ಆಚೆಯ ದಡದಲ್ಲಿ ಕಾದು ಕುಳಿತಿರುವವನು. ನಿರಾತಂಕವಾಗಿ ಕಾದು ಕುಳಿತಿರಬಲ್ಲವನು, ಲೋಕ ಜೀವನವು ತನ್ನ ಪಾಡಿಗೆ ತಾನು ನಡೆಯುವಂತೆ ಮಾಡಿದ್ದಾನೆ ಎಂದೂ ಅರ್ಥವಾಗುತ್ತದೆ. ಲೋಕವು ತನ್ನ ಪಾಡಿನಂತೆ ನಡೆಯುವಂತೆಸಗಿದವನು ತನಗೆ ಬೇಕಾದಂತೆ ಲೋಕವನ್ನು ಮಾಡಬಲ್ಲನೆಂದು ನಾವು ತಿಳಿಯಬೇಕು!

ನಿಮ್ಮ ದಾರಿ ನಿಮ್ಮದು; ನನ್ನ ದಾರಿ ನನ್ನದು ಎನ್ನುವುದಿದು ಈ ಲೋಕದ ಮಾತು. ಮನುಷ್ಯರಾಡುವ ಮಾತು. ಕೃಷ್ಣನಾಡುವ ಮಾತು ಬೇರೆ ಬಗೆಯದು. ನಾವು ದಾರಿಗಳ ಮಾತಾಡುವೆವು. ದಾರಿಗಾಗಿ ಜಗಳಾಡುವೆವು. ಒಂದೊಮ್ಮೆ ‘ಗುರಿ’ಯೇ ದಾರಿಗಳ ಬಗೆಗೆ ಮಾತಾಡುವುದಾದರೆ ಅದು ಹೇಗಿರಬಹುದು ಎಂದು ಒಮ್ಮೆ ಕೂಡ ಯೋಚಿಸಿಲ್ಲ. ಕೃಷ್ಣನ ಮಾತು, ‘ಗುರಿ’ಯೇ ಮಾತಾಡಿದಂತಿದೆ! ಆಶ್ಚರ್ಯವೆಂದರೆ, ‘ಗುರಿ’, ದಾರಿಗಳ ಸ್ವಾತಂತ್ರ್ಯವನ್ನು ಮಾನ್ಯ ಮಾಡುವಂತಿದೆ. ಏಕೆಂದರೆ ಅದಕ್ಕಾವ ಆತಂಕವೂ ಇಲ್ಲ. ‘ಗುರಿ’ ಎಲ್ಲೆಡೆ ಇದೆ. ಎಲ್ಲೆಡೆ ಇರುವ ಗುರಿಗೆ ಗುರಿಮುಟ್ಟುವ ಮಾತೇ ಒಂದು ಚೋದ್ಯ! ಅಥವಾ ಅದು ತನ್ನನ್ನು ತಾನೇ ತೆರೆದು ತೋರಿಸಬಲ್ಲುದಾಗಿ, ಅದನ್ನು ಮುಟ್ಟುವ ದಾರಿಯನ್ನು ಅದೇ ಕಡೆದಿದೆ. ನಾವು ಇದು ನಮ್ಮ ದಾರಿ; ನಾವು ಕಂಡುಕೊಂಡ ದಾರಿ ಎನ್ನುವೆವು. ಹಾಗೆನ್ನುವಾಗ ನಾವು ನಮ್ಮನ್ನೇ ‘ಗುರಿ’ ಎಂದು ಬಗೆದಂತಾಗುತ್ತದೆ ಎಂದು ಮರೆಯುವೆವು. ‘ದಾರಿ’ ‘ಗುರಿ’ಗೆ ಸೇರಿದ್ದು; ನಮ್ಮದಲ್ಲ ಎಂದು ನಾವು ತಿಳಿಯಬೇಕು. ಆದರೆ ‘ಗುರಿ’, ದಾರಿಯು ಅದನ್ನು ನಡೆಯುವವರಿಗೆ ಸೇರಿದ್ದು ಎನ್ನುತ್ತದೆ. ಅಂದರೆ ದಾರಿ ನಡೆಯುವವರೆಲ್ಲ ನನ್ನವರು ಎಂದಂತೆ!

ಕೃಷ್ಣನಿಗೆ ತಿಳಿದಿದೆ. ನಮಗೆ ತಿಳಿದಿಲ್ಲ; ತಿಳಿಯಬೇಕಿದೆ. ಕೃಷ್ಣನು ಯಾವಾಗಲೂ ಇದ್ದಾನೆ. ಅಂದರೆ ತಿಳುವಳಿಕೆಯು, ಯಾವಾಗಲೂ ಇದೆ. ನಮಗೆ ತಿಳಿಯದೇ ಇರುವಾಗಲೂ ನಾವು ತಿಳಿಯಬೇಕಾದ ತಿಳುವಳಿಕೆಯು ಇದ್ದೇ ಇದೆ. ಅದನ್ನು ಪಡೆದಾಗ ಅದನ್ನು ಮರಳಿ ಪಡೆದಂತೆ. ಮರಳಿ ಪಡೆದಾಗಲೂ ಇದೇ ತಾನೇ ಪಡೆದಂತೆ ಹೊಚ್ಚ ಹೊಸತು! ಎಂದೂ ಕಳೆಗುಂದದ Freshness! ಹೊಸತಿನ ಈ ಅನುಭವಕ್ಕಾಗಿಯೇ, ಮರಳಿ–ಪಡೆದಂತೆ ಎನ್ನುವ ಪರೀಕ್ಷೆಯ ಸಂದರ್ಭವನ್ನು ಅದು ಏರ್ಪಡಿಸಿದೆಯೋ ಏನೋ. ನಮ್ಮನ್ನು ಪರೀಕ್ಷಿಸುವಲ್ಲಿ ಅದು ತನ್ನನ್ನು ತಾನೇ ಪರೀಕ್ಷಿಸಿಕೊಳ್ಳುತ್ತಿದೆಯೇನೋ!

ತನ್ನನ್ನು ತಾನೇ ತೆರೆದು ತೋರಿಸುವುದು ಪ್ರೀತಿಯ, ವಾತ್ಸಲ್ಯದ ವಿದ್ಯಮಾನವಾಗಿದೆ. ಈ ಪ್ರೀತಿಯೇ, ಮೂಲದಲ್ಲಿರುವ ಪ್ರೀತಿಯೇ, ನಮ್ಮಲ್ಲಿ ‘ಭಕ್ತಿ’ಯಾಗಿ ಪರಿಣತವಾಗುವುದು. ಅಂದರೆ ‘ಭಕ್ತಿ’ ಎಂದರೆ ಕೃಷ್ಣನು ನಮ್ಮಲ್ಲಿಟ್ಟ ಪ್ರೀತಿಗೆ ನಮ್ಮಲ್ಲಿ ಉಂಟಾಗುವ ಸ್ಪಂದನ.

ಇದರ ಮೇಲಿನಿಂದ ತಿಳಿಯಬಹುದಾದುದೇನೆಂದರೆ ಅದು ‘ಮೂಲ.’ ನಾವು ‘ಪ್ರತಿಫಲನ.’ ನಾವು ನಮ್ಮ ದಾರಿ ಎಂದು ತಿಳಿದುಕೊಂಡಿರುವುದು ನಿಜಕ್ಕೂ ನಮ್ಮ ದಾರಿಯಲ್ಲ ಅವನದೇ ದಾರಿ. ಅವನಿಗೆ ಸಾವಿರ ಕಾಲು ಸಹಸ್ರ ಪಾತ್ ಎಂಬ ಮಾತು ವೇದದಲ್ಲಿ ಬಂದಿತ್ತು. ನಮ್ಮ ಕಿವಿಗೂ ಬಿದ್ದಿತ್ತು. ಆದರೆ ಆ ಮಾತಿಗೆ ಈ ಅರ್ಥ ಇರಬಹುದು ಎಂದು ತಿಳಿದಿರಲಿಲ್ಲ. ಅದನ್ನೂ ಅವನೇ ತಿಳಿಸಬೇಕು! ತಿಳಿಸುತ್ತಾನೆ ಕೂಡ!

ಕೃಷ್ಣನೆಂದರೆ ಅವನು ಸರ್ವತಂತ್ರ ಸ್ವತಂತ್ರ. ಆದುದರಿಂದ, ನೀವು ಹೇಗೆ ಭಾವಿಸುವಿರೋ ಹಾಗೆಯೇ ಯಥೈವ ನಾನು ಒಲಿಯುವವನು; ಒಲಿಯಬಲ್ಲೆ, ನನ್ನೊಲವಿಗೆ ಅಡೆತಡೆಗಳೇ ಇಲ್ಲ ಎನ್ನುವನು. ನಮಗೂ, ಎಲ್ಲಿಯೂ ಯಾರೂ ಕೊಡದ ಸ್ವಾತಂತ್ರ್ಯವನ್ನು ಕೊಡುವನು. ಇದನ್ನು ಗ್ರಹಿಸಿ, ಬಸವಣ್ಣ ‘ನಿನಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ’ ಎಂದು ಹೇಳಿದರು.

■ ತೋಷ

## ಮಾತೇ ಮುತ್ತು

★ ಕನಸುಗಳನ್ನು ನಂಬಿ. ಅಲ್ಲಿ ಸ್ವರ್ಗದ ದ್ವಾರಗಳು ಅಡಗಿರುತ್ತವೆ.
ಖಲೀಲ್ ಗಿಬ್ರಾನ್

★ ಎಲ್ಲಿದ್ದೀರೊ ಅಲ್ಲಿಂದಲೇ ಆರಂಭಿಸಿ, ಏನಿದೆಯೋ ಅದನ್ನು ಬಳಸಿ, ಏನು ಸಾಧ್ಯವಿದೆಯೋ ಅದನ್ನು ಮಾಡಿ.
ಆರ್ಥರ್ ಆ್ಯಶ್

★ ಜೀವನವನ್ನು ತುಂಬ ಗಂಭೀರವಾಗಿ ತೆಗೆದುಕೊಳ್ಳಬೇಡಿ. ಆಮೇಲೆ ಅದರಿಂದ ಹೊರಬರಲು ಆಗಲಿಕ್ಕಿಲ್ಲ.
ಎಲ್ಬರ್ಟ್ ಹಬ್ಬರ್ಡ್

★ ನಿನ್ನ ಬಗ್ಗೆಯೇ ನೀನು ಮಾತನಾಡಬೇಡ. ಅದನ್ನು ನೀನು ಸತ್ತಾಗ ಜಗತ್ತು ಮಾಡುತ್ತದೆ.
ವಿಲ್ಸನ್ ಮಿಜ್ನರ್

★ ಅವಕಾಶ ಇಲ್ಲದಿದ್ದರೆ ಸಾಮರ್ಥ್ಯ ಇದ್ದೂ ಪ್ರಯೋಜನವಿಲ್ಲ.
ನೆಪೋಲಿಯನ್ ಬೋನಪಾರ್ಟ್

★ ನನ್ನ ಕುದುರೆ ಚೆನ್ನಾಗಿ ಓಡುತ್ತಿರುವಾಗ ಅದಕ್ಕೆ ಸಕ್ಕರೆ ತಿನ್ನಿಸಲು ನಿಲ್ಲಿಸುವುದಿಲ್ಲ.
ವಿಲಿಯಂ ಫಾಕ್ನರ್

★ ಮನುಷ್ಯಪ್ರಾಣಿಗಿಂತ ತಮಾಷೆಯಾದದ್ದು ಯಾವುದೂ ಇಲ್ಲ.
ವಾಲ್ಟ್ ಡಿಸ್ನಿ

★ ನಾವು ವ್ಯಕ್ತಿಯನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತೇವೆ, ಅವನ ಇತಿಹಾಸವನ್ನಲ್ಲ.
ಹೆನ್ರಿ ಫೋರ್ಡ್

★ ಗಾಳಿ ಮತ್ತು ಸಮುದ್ರದ ಅಲೆಗಳು ಯಾವತ್ತೂ ಧೈರ್ಯವಂತ ನಾವಿಕನ ಪರವಾಗಿರುತ್ತವೆ.
ಎಡ್ವರ್ಡ್ ಗಿಬ್ಬನ್